**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**302/2022

| | | | |
|---|---|---|---|
| **ಸಾಕ್ಷಿಯ ಹೆಸರು** | **:** | **ಕುಮಾರ ಎನ್.ಜೆ.** | **PW**. 4 |
| **ತಂದೆಯ ಹೆಸರು** | **:** | **ಜವರಯ್ಯ** | **CW**.9 |
| **ವಯಸ್ಸು** | **:** | **56 ವರ್ಷಗಳು** | |
| **ಉದ್ಯೋಗ** | **:** | **ಎ.ಇ. ಪಿ ಡಬ್ಲ್ಯೂ ಡಿ ಪಿರಿಯಾಪಟ್ಟಣ ವಿಭಾಗ** | |
| **ವಾಸಸ್ಥಳ** | **:** | **ಪಿರಿಯಾಪಟ್ಟಣ** | |

ದಿನಾಂಕ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಡಿಸೆಂಬರ್ 2019 ರಿಂದ ಇಲ್ಲಿಯವರೆಗೆ ಎ.ಇ. ಪಿ ಡಬ್ಲ್ಯೂ ಡಿ ಪಿರಿಯಾಪಟ್ಟಣ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಿರಿಯಾಪಟ್ಟಣ ಪೋಲಿಸರ ಕೋರಿಕೆ ಮೇರೆಗೆ ಹಾಗೂ ನಮ್ಮ ಮೇಲಾಧಿಕಾರಿಗಳ ಸೂಚನೆ ಮೇರೆಗೆ ದಿನಾಂಕ 28.04.2021 ರಂದು ಪಿರಿಯಾಪಟ್ಟಣ ಪೋಲಿಸ್ ಠಾಣೆಯ ಚಾಸಾ.15 ರವರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.15 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳದಲ್ಲಿ ಕೃತ್ಯ ನಡೆದ ಎರಡು ಸ್ಥಳಗಳಲ್ಲಿ ನಕಾಶೆ ತಯಾರಿಸಿ ಕಚೇರಿಗೆ ಬಂದು ನಮ್ಮ ಮೇಲಾಧಿಕಾರಿಗಳ ಮೂಲಕ ಪೋಲಿಸರಿಗೆ ಕಳುಹಿಸಿಕೊಟ್ಟಿದ್ದೇವೆ. ಸದರಿ ಎರಡು ನಕಾಶೆಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.3 ಮತ್ತು 4 ಎಂದು, ಹಾಗೂ ಕೃತ್ಯ ನಡೆದ ಸ್ಥಳಗಳನ್ನು ನಿಪಿ.3(ಎ) ಮತ್ತು ನಿಪಿ.4(ಎ) ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ.3(ಬಿ) ಮತ್ತು ನಿಪಿ.4(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್.ಪಿ. ವಕೀಲರಿಂದಃ–**

ನಿಪಿ.3 ಮತ್ತು 4 ಗಳನ್ನು ಕಚೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಜೊತೆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ನಿಪಿ.3 ಮತ್ತು 4 ಅನ್ನು ತಯಾರಿಸಿಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.